**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ, ಹುಬ್ಬಳ್ಳಿ.**

**C.C. 35-24**

ಪಿ.ಡಬ್ಲ್ಯೂ- 1

ಸಿ.ಡಬ್ಲ್ಯೂ-3

ಸಾಕ್ಷಿದಾರರ ಹೆಸರು : ಜೋಸೆಫ್ ಗೋಣ

ತಂದೆ ಹೆಸರು : ಡ್ಯಾನಿಯಲ್ ಗೋಣ

ವಯಸ್ಸು : 37 ವರ್ಷ

ಉದ್ಯೋಗ : ಆಟೋ ಚಾಲಕ

ವಾಸಸ್ಥಳ : ಹುಬ್ಬಳ್ಳಿ

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 11.07.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಅಂದಾಜು 7-8 ತಿಂಗಳುಗಳಿಂದ ಪೋಲಿಸರು ನನ್ನನ್ನು ಮತ್ತು ಚಾಸಾ-2 ರವರನ್ನು ಪೂರ್ವ ಸಂಚಾರ ಪೋಲಿಸ ಠಾಣೆಗೆ ಕರೆಸಿದ್ದರು. ಆಟೋ ಪಂಚನಾಮೆ ಮಾಡಿರುತ್ತಾರೆ. ಪೋಲಿಸರು ಆಟೋಕ್ಕೆ ಜಖಂ ಆದ ಬಗ್ಗೆ ತೋರಿಸಿದರು ಮತ್ತು ಅದನ್ನು ವಶಕ್ಕೆ ಪಡೆದುಕೊಂಡರು. ಆಗ ಸಮಯ 12 ರಿಂದ 1 ಗಂಟೆವರೆಗೆ ಪಂಚನಾಮೆ ಮಾಡಿರುತ್ತಾರೆ. ಸಾಕ್ಷಿಯು ಸದರಿ ಪಂಚನಾಮೆ ನೋಡಿ ಗುರುತಿಸಿದ್ದು ಅದನ್ನು ನಿಪಿ.1 ಎಂದು ಗುರುತಿಸಲಾಯಿತು. ಸಾಕ್ಷಿ ಸಹಿಯನ್ನು ನಿಪಿ.1-ಎ ಎಂದು ಗುರುತಿಸಲಾಯಿತು. ಆ ಕಾಲಕ್ಕೆ ತೆಗೆದ ಪೊಟೋವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ.2 ಎಂದು ಗುರುತಿಸಲಾಯಿತು. ನಿಪಿ.2 ರಲ್ಲಿರುವ ಆಟೋವನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ನಂತರ ಅದೇ ದಿನ 1.30 ಗಂಟೆಗೆ ಪೋಲಿಸರು ನನ್ನನ್ನು ಮತ್ತು ಚಾಸಾ-2 ರವರನ್ನು ಅಪಘಾತದ ಪ್ರತ್ಯಕ್ಷದರ್ಶಿಯಾದ ಒಬ್ಬ ವ್ಯಕ್ತಿ ಪೋಲಿಸ ಠಾಣೆಯಲ್ಲಿದ್ದು ಅವರು ಅಪಘಾತದ ಸ್ಥಳವನ್ನು ತೋರಿಸುವುದಾಗಿ ಹೇಳಿದ ಮೇರೆಗೆ ನಮ್ಮನ್ನು ಕರೆದುಕೊಂಡು ಬಸವೇಶ್ವರ ಪಾರ್ಕ ಬಳಿ ಕರೆದುಕೊಂಡು ಹೋಗಿದ್ದು ಅಲ್ಲಿ ಆ ವ್ಯಕ್ತಿ ಅಪಘಾತ ಸ್ಥಳ ತೋರಿಸಿದ್ದು, ಸದರಿ ಸ್ಥಳದಲ್ಲಿ ಮಃ 1.30 ರಿಂದ 2.30 ವರೆಗೆ ಸ್ಥಳ ಪಂಚನಾಮೆ ಮಾಡಿರುತ್ತಾರೆ. ಸಾಕ್ಷಿಯು ಪಂಚನಾಮೆಯಲ್ಲಿರುವ ಸ್ಥಳ ನೋಡಿ ಗುರುತಿಸಿದ್ದು ಅದನ್ನು ನಿಪಿ.3 ಎಂದು, ಸಾಕ್ಷಿ ಸಹಿಯನ್ನು ನಿಪಿ.3-ಎ ಎಂದು ಗುರುತಿಸಲಾಯಿತು. ಆ ಕಾಲಕ್ಕೆ ತೆಗೆದ ಎರಡು ಪೊಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ.4 ಮತ್ತು ನಿಪಿ.5 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ ವಿ ಎಸ್ ವಕೀಲರಿಂದಃ**

ಪೋಲಿಸರು ಬರೆದಿಟ್ಟ ಪಂಚನಾಮೆಗೆ ಸಹಿ ಮಾಡಿರುತ್ತೇನೆ ಅಂದರೆ ಸರಿ. ಅದರಲ್ಲಿ ಏನು ಬರೆದಿರುತ್ತಾರೆ ಅಂದರೆ ನನಗೆ ಗೊತ್ತಿಲ್ಲ. ನಾವು ಪೋಲಿಸರಿಗೆ ಮಾಹಿತಿ ನೀಡಿಲ್ಲ. ಪೊಟೋದಲ್ಲಿರುವ ಸ್ಥಳದ ಪೂರ್ವ – ಪಶ್ಚಿಮ ಹಾಗೂ ಉತ್ತರ – ದಕ್ಷಿಣ ದಿಕ್ಕಿನ ಬಗ್ಗೆ ಹೇಳಲು ಬರುವುದಿಲ್ಲ. ನಿಶ್ಚಿತವಾಗಿ ಸ್ಥಳದ ಬಗ್ಗೆ ಹೇಳಲು ಬರುವುದಿಲ್ಲ. ಪೊಟೋದಲ್ಲಿ ಸ್ಥಳ ತೋರಿಸಿದ ವ್ಯಕ್ತಿ ಇಲ್ಲ ಅಂದರೆ ಸರಿಯಲ್ಲ. ಅವರ ಹೆಸರು ಗೊತ್ತಿಲ್ಲ. ಪೋಲಿಸರು ಪಂಚನಾಮೆ ಮಾಡಲು ನೋಟಿಸು ಕೊಟ್ಟಿಲ್ಲ. ಪ್ರಕರಣದ ಬಗ್ಗೆ ಏನೂ ಗೊತ್ತಿದ್ದಿದರೂ ಸಹಿತ ದೂರುದಾರನ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಂ.ಎಫ್.ಸಿ. ಹುಬ್ಬಳ್ಳಿ.